

# ಸೇನೆಯೆಡೆಗೆ ನಾರಿ ನಡಿಗೆ

■ ಐ. ಜಿ. ಕರಾಯ

ಮೊನ್ನೆಯಷ್ಟೇ ಅಮೆರಿಕ ಅಧ್ಯಕ್ಷ ಬರಾಕ್ ಒಬಾಮ ಭಾರತದ ಗಣರಾಜ್ಯೋತ್ಸವಕ್ಕೆ ಬಂದು ಪಥಸಂಚಲನ ವೀಕ್ಷಿಸಿ ಶಹಬ್ಬಾಸ್ ಅಂದಿದ್ದು ಹಳೇಯ ಸುದ್ದಿ. ಆದರೆ ಇದೇ ಪೆರೇಡ್‌ನಲ್ಲಿ ಒಬಾಮ ಸಹಿತ ಎಲ್ಲರ ಮನ ಸೆಳೆದದ್ದು ಸೇನೆಯ ಮಹಿಳಾ ಅಧಿಕಾರಿಗಳಿಂದ ತುಂಬಿದ್ದ ಮೂರು ತುಕಡಿಗಳು. ತಲಾ 148 ಜನ ಕಮಾಂಡಿಗ್ ಗ್ರೇಡ್‌ನ ಮಹಿಳಾ ಅಧಿಕಾರಿಗಳಿದ್ದ ವಾಯುಸೇನೆ, ನೌಕಾಸೇನೆ ಮತ್ತು ಭೂಸೇನೆಯ ತುಕಡಿಗಳು ಇದೇ ಪ್ರಥಮ ಬಾರಿಗೆ ಗಣರಾಜ್ಯೋತ್ಸವ ಪೆರೇಡ್‌ನಲ್ಲಿ ಪಾಲ್ಗೊಂಡಿದ್ದವು. ಈ ತುಕಡಿಗಳನ್ನು ಮುನ್ನಡೆಸಿದ್ದು, ಕಮಾಂಡ್ ಕೊಟ್ಟದ್ದು ವಾಯುಸೇನೆಯ ಅಧಿಕಾರಿ ಪೂಜಾ ಠಾಕೂರ್ ಎನ್ನುವುದು ಇಲ್ಲಿ ವಿಶೇಷ. ಇದೇ ಮೊದಲ ಬಾರಿಗೆ ಮಹಿಳಾ ಅಧಿಕಾರಿಯೊಬ್ಬರಿಗೆ ಈ ಅವಕಾಶ ಲಭಿಸಿದ್ದು ಹೆಮ್ಮೆಯ ಸಂಗತಿ. ಹಾಗಾಗಿ ಈ ಅಪೂರ್ವ ಅವಕಾಶ ಸೇನೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮಹಿಳೆಯರ ಪಾಲಿಗೆ ಒಂದು ಆಶಾಭಾವದಂತೆ ಗೋಚರಿಸಿದೆ.

ಈ ಹಿಂದೆ 2012ರಲ್ಲಿ ಗಣರಾಜ್ಯೋತ್ಸವದ ಸಂದರ್ಭ ವಾಯುಸೇನೆಯ ಅಧಿಕಾರಿ ಸ್ನೇಹಾ ಶೆಖಾವತ್ ಪಥಸಂಚಲವನ್ನು ಮುನ್ನಡೆಸಿ ಸುದ್ದಿ ಮಾಡಿದ್ದರು. ಆ ಬಳಿಕ ಈ ಬಾರಿ ಕೇವಲ ಮಹಿಳಾ ಅಧಿಕಾರಿಗಳಿಂದಲೇ ತುಂಬಿದ ಮೂರು ಪ್ರತ್ಯೇಕ ತುಕಡಿಯನ್ನು ಪಥಸಂಚಲನದಲ್ಲಿ ಸೇರಿಸಲಾಗಿದೆ.

ಹಿಂದೆ ಸೇನೆಯಲ್ಲಿ ಮಹಿಳೆಯರನ್ನು ಹೆಚ್ಚಾಗಿ ನರ್ಸ್, ವೈದ್ಯರು ಮತ್ತು ಶುಶ್ರೂಷಕರ ಕೆಲಸಗಳಿಗೇ ಹೆಚ್ಚು ನೇಮಿಸಲಾಗುತ್ತಿತ್ತು. ಮಹಿಳೆಯರು ಯುದ್ಧಭೂಮಿಯಲ್ಲಿ ಹೆಚ್ಚು ಸಮರ್ಥರಲ್ಲ ಎಂಬ ತಪ್ಪು ಭಾವನೆ ಮತ್ತು ಪುರುಷ ಪ್ರಧಾನ ವ್ಯವಸ್ಥೆಯೇ ಇದಕ್ಕೆ ಅಡ್ಡಗಾಲು ಹಾಕುತ್ತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಈ ಎಲ್ಲ ಅಡೆತಡೆಗಳನ್ನು ನಿವಾರಿಸುವತ್ತ ಸರಕಾರ ಮತ್ತು ಸುಪ್ರೀಂ ಕೋರ್ಟ್ ಗಮನ ಹರಿಸಿದೆ. ಈ ಕುರಿತಾದ ರಾಜಕೀಯ, ಸಾಂಸ್ಕೃತಿಕ ಇತಿಮಿತಿಗಳನ್ನು ಬಗೆಹರಿಸಿದೆ. ಇದರ ಪರಿಣಾಮವೇ ಇಂದು ಮಹಿಳೆಯರಿಗೆ ಪುರುಷರಷ್ಟೇ ಸಮಾನವಾದ ಪ್ರಾಧಾನ್ಯತೆ ನೀಡಲಾಗಿದೆ.

1992ನೇ ಇಸವಿ ಸೇನೆಯ ಮಹಿಳೆಯರ ಪಾಲಿಗೆ ಒಂದು ಮೈಲಿಗಲ್ಲು, ಅಲ್ಲಿಂದ ಮಹಿಳೆಯರಿಗೆ ಕಮಾಂಡಿಂಗ್ ಅಧಿಕಾರಿ ಮಟ್ಟದ ಹುದ್ದೆಗಳನ್ನು ನೀಡಲಾಯಿತು. ಇಂದು ಸೇನೆಯಲ್ಲಿರುವ 59,400 ಮಂದಿ ಅಧಿಕಾರಿಗಳಲ್ಲಿ 2875 ಮಹಿಳೆಯರು ಮಾತ್ರ ಇದ್ದಾರೆ. ಅವರಲ್ಲಿ ವಾಯುಸೇನೆಯಲ್ಲಿ 793, ನೌಕಾಸೇನೆಯಲ್ಲಿ 258, ಶಸಸ್ತ್ರ ಪಡೆಯಲ್ಲಿ 752 ಮತ್ತು ಭೂಸೇನೆಯಲ್ಲಿ 1072 ಮಂದಿ ಮಹಿಳಾ ಅಧಿಕಾರಿಗಳಿದ್ದಾರೆ. ಅದೇ ಅಮೆರಿಕದ ಸೇನೆಯಲ್ಲಿ 2 ಲಕ್ಷ ಮಹಿಳೆಯರು ಇದ್ದಾರೆ, ಅಂದರೆ ಅಮೆರಿಕ ಸೇನೆಯ ಶೇ. 20ರಷ್ಟು.

ಸದ್ಯ ನಮ್ಮ ಸೇನಾ ನೇಮಕಾತಿಯಲ್ಲಿ ಮಹಿಳೆಯರಿಗೆ ವಿಶೇಷ ಅವಕಾಶದ ಜೊತೆಗೆ ಅಧಿಕಾರಿ ಮಟ್ಟದ ಹುದ್ದೆಯನ್ನೂ ನೀಡುತ್ತಿರುವುದು ಒಂದು ಉತ್ತಮ ಬೆಳವಣಿಗೆ. ಸೈನ್ಯದ ವೈದ್ಯಕೀಯ ವಿಭಾಗಕಷ್ಟೇ ಸೀಮಿತ ಎಂಬ ಭಾವನೆಯಿದ್ದ ಮಹಿಳೆಯರ ಪಾಲಿಗೆ ಈಗ ಪುರುಷರಷ್ಟೇ ಪ್ರಾಧಾನ್ಯತೆ ನೀಡುತ್ತಿದ್ದಾರೆ. ಮುಂದೆ ಇನ್ನಷ್ಟು ಹೆಚ್ಚಿನ ಹೊಣೆಗಾರಿಕೆ ನಿರ್ವಹಿಸುವ ಅವಕಾಶ ಲಭಿಸಲಿದೆ. ಈ ಮಧ್ಯೆ ಪ್ರತಿ ಆರು ತಿಂಗಳಿಗೊಮ್ಮೆ ನಡೆಯುವ ಸೇನಾ ನೇಮಕಾತಿ ರ್‍ಯಾಲಿಗಳಲ್ಲಿ ಸೇನಾಧಿಕಾರಿ ಹುದ್ದೆ ಬಯಸಿ ಸುಮಾರು 5000 ಯುವತಿಯರು ಅರ್ಜಿ ಸಲ್ಲಿಸುತ್ತಿರುವುದು ಸೇನೆಯೆಡೆಗೆ ಮಹಿಳೆಯರು ಆಕರ್ಷಿತರಾಗುತ್ತಿದ್ದಾರೆ ಎಂಬುದನ್ನು ಸೂಚಿಸುತ್ತದೆ. ಇವರೆಲ್ಲರೂ ವಿಜ್ಞಾನ, ಎಂಜಿನಿಯರಿಂಗ್ ಪದವಿ ಮತ್ತು ಸ್ನಾತಕೋತ್ತರ ಪದವೀಧರರು ಎನ್ನುವುದು ಗಮನಾರ್ಹ ಸಂಗತಿ. ■